೧೧–೩೦ ಪ. ಎಂ.

ಶ್ರೀ ರಾಮಕೃಷ್ಣ ಹೆಗಡೆ.—ಸನ್ಮಾನ್ಯ ಅಧ್ಯಕ್ಷರೇ, ನೈ ಮೇಲೆ ಹಾಕಿಕೊಂಡಿರತಕ್ಕಂಥ ಬಟ್ಟೆ ಬಣ್ಣವನ್ನು ಬದಲಾಯಿಸಿದರೆ, ತಲೆಯಲ್ಲಿರತಕ್ಕ ದುರ್ವಿಚಾರಗಳು ಹೋಗುತ್ತವೆಂದು ನಾನು ತಿಳಿದುಕೊಂಡಿಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಣ್ಣ ಎಂದ ತಕ್ಷಣ ಮುಖ್ಯ ಮಂತ್ರಿಗಳು ಎದ್ದರು. ... ...

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಾ ಕಡೆಗೂ ಪೋಲೀಸಿನವರಿಗೆ ಇರತಕ್ಕಂಥ ಸಮಸ್ಯೆ ಕಾಣಿಬಿಟ್ಟಿ, ಮತ್ತು ಕೆಲವು ವಿಶೇಷವಾದಂಥ ಜವಾಬ್ದಾರಿಗಳನ್ನು ನಿರ್ವಹಿಸತಕ್ಕಂಥ ಪೋಲೀಸರಿಗೆ ಎಂದರೆ, ಟ್ರಾಫಿಕ್‌ನವರು ಬಿಳಿ ಸಮವಸ್ತ್ರ ಹಾಕುತ್ತಾರೆ. ಬಾಂಬೆಯಲ್ಲಿ ನೀಲಿ ಸಮವಸ್ತ್ರವನ್ನು ಹಾಕುತ್ತಾರೆ. ಅದೇ ರೀತಿ ಫೈರ್‌ಫೋರ್ಸ್ ಡಿಪಾರ್ಟ್‌ಮೆಂಟ್‌ನವರು ಮತ್ತು ಅದಕ್ಕೆ ಸಂಬಂಧಪಟ್ಟ ದಳಕ್ಕೆ ಬೇರೆ ಸಮವಸ್ತ್ರ ಇರಬಹುದು. ಸದ್ಯಕ್ಕೆ ಸಮವಸ್ತ್ರದ ಬಣ್ಣವನ್ನು ಬದಲಾಯಿಸುವ ವಿಚಾರ ಸರ್ಕಾರಕ್ಕೆ ಇಲ್ಲ ಮತ್ತು ಇದರಿಂದ ಯಾವ ಪ್ರಯೋಜನವೂ ಇಲ್ಲ. ಮುಖ್ಯ ಮಾನ್ಯ ಶಿವನಂಜಪ್ಪನವರು ಹೇಳಿದರು, ಪೋಲೀಸಿನವರಿಗೆ ಸಿಗತಕ್ಕ ಸಂಬಳ ಕಡಿಮೆ, ಕೇವಲ ೧೨೦೦ ಅಥವಾ ೧೩೦೦ ಎಂದು. ಹಾಗೆ ನೋಡಿದರೆ, ಯಾವ ಸರ್ಕಾರಿ ಅಧಿಕಾರಿಗಳನ್ನು ಕೇಳಿದರೂ ಸಂಬಳ ಕಡಿಮೆ ಎಂದೇ ಹೇಳುತ್ತಾರೆ. ಕೆಲವು ವರ್ಷಗಳ ಹಿಂದೆ ಪೋಲೀಸಿನವರ ಸಂಬಳ ಎಷ್ಟಿತ್ತು ಎಂಬುದನ್ನು ನೋಡಬೇಕು. ಬೇರೆ ರಾಜ್ಯಗಳ ಜೊತೆಗೆ ಹೋಲಿಸಿ ನೋಡಿದರೆ, ನಮ್ಮ ಪೋಲೀಸಿನವರ ಸಂಬಳ ಕಡಿಮೆ ಇಲ್ಲ ಇನ್ನು ಪೋಲೀಸಿನವರಿಗೆ ಹೆಚ್ಚು ಅನುಕೂಲತೆಗಳನ್ನು ಒದಗಿಸುವುದಕ್ಕೆ, ಹಾಗೂ ಮನೆಗಳನ್ನು ಕಟ್ಟಿ ಕೊಡುವುದಕ್ಕೆ, ಪ್ರತ್ಯೇಕವಾದ ಹೌಸಿಂಗ್ ಕಾರ್ಪೊರೇಷನ್ ಮಾಡಿದ್ದೇವೆ. ದುರ್ದೈವವಶಾತ್ ಈ ಕಾರ್ಪೊರೇಷನ್ ಜಾರಿಯಲ್ಲಿ ಬಂದ ಮೊದಲನೇಯ ವರ್ಷ ಎಷ್ಟು ತ್ವರಿತಗತಿಯಲ್ಲಿ ಕೆಲಸ ಆಗಬೇಕಾಗಿತ್ತೋ ಆಷ್ಟು ಆಗಲಿಲ್ಲ. ಇನ್ನು ಮುಂದೆ ತ್ವರಿತಗತಿಯಿಂದ ಕೆಲಸ ಮಾಡಿಸುತ್ತೇವೆ. ಮತ್ತು ಇದಕ್ಕೆ ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಹಣವನ್ನು ತರುಸ್ತಿದ್ದೇವೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಪದವೀಧರರು ಕಾನ್‌ಸ್ಟೇಬಲ್‌ಗಳಾಗಿದ್ದಾರೆ, ಇವರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಸರ್ಕಾರದ ಗಮನದಲ್ಲಿದೆ. ಪದವೀಧರರಿಗೆ, ಅನೇಕರಿಗೆ ಉದ್ಯೋಗ ಸಿಗುತ್ತಿಲ್ಲ. ಸರ್ಕಾರಿ ನೌಕರಿ ಸಿಗುತ್ತಿಲ್ಲ. ಆದ್ದರಿಂದ ಪೋಲೀಸ್ ಪೇದೆಯಾದರೂ ಪರವಾಯಿಲ್ಲ ಎಂದು ಬರುತ್ತಾರೆ. ಅವರ ಅರ್ಹತೆಗೆ ಅಗತ್ಯವಾಗಿರತಕ್ಕಂಥಾದ್ದು ಅಲ್ಲದೇ ಇದ್ದರೂ ಕೂಡ ಪೋಲೀಸ್ ಆದರೂ ಆಗುತ್ತೇವೆಂದು ಒಪ್ಪಿಕೊಂಡು ಬಂದಿದ್ದಾರೆ. ಇದರ ಬಗ್ಗೆ ಸರ್ಕಾರ ಮುಂದೆ ಯೋಚನೆ ಮಾಡುತ್ತದೆ.

ಕೊಡಗು ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮವು ವಿತರಣೆ ಮಾಡಿರುವ ಸಾಲ

೧೯೪೭ ಶ್ರೀ ಡಿ, ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ರಾಜ್ಯದ ಜನತೆಗೆ ಕರ್ನಾಟಕ ರಾಜ್ಯ ಹಣಕಾಸು ನಿಗಮವು ಸಾಲ ನೀಡುತ್ತಿರುವುದು ನಿಜವಲ್ಲವೆ ?

ಆ) ಕಳೆದ ಮೂರು ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ವಿತರಣೆ ಮಾಡಿದ ಒಟ್ಟು ಮೊಬಲಗು

ಇ) ಕೊಡಗು ಜಿಲ್ಲೆಯಲ್ಲಿ ಸಾಲ ಪಡೆದು ಪಾವತಿ ಮಾಡದೆ ಸುಸ್ತಿದಾರರಾಗಿರುವವರ ಸಂಖ್ಯೆ ?

ಈ) ಒಂದು ಲಕ್ಷಕ್ಕೂ ಹೆಚ್ಚು ಮೊಬಲಿಗಿನ ಸುಸ್ತಿದಾರರ ಹೆಸರು, ಸುಸ್ತಿ ಮೊಬಲಗು (ಸುಸ್ತಿಯಾದ ಒಟ್ಟು ಮೊಬಲಗನ್ನು ದಯವಿಟ್ಟು ತಿಳಿಸಿ)

ಉ) ಪ್ರತಿಯೊಬ್ಬ ಸುಸ್ತಿದಾರರಿಂದ ಹಣ ವಸೂಲಿಗಾಗಿ ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿ).—

ಅ) ಈ ರಾಜ್ಯದಲ್ಲಿ ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮವು ಕೈಗಾರಿಕೋದ್ಯಮಿಗಳಿಗೆ ಸಾಲ ನೀಡುತ್ತಿರುವುದು ನಿಜ

ಆ) ಕಳೆದ ಮೂರು ವರ್ಷಗಳಿಂದ ನಿಗಮವು ಕೊಡಗು ಜಿಲ್ಲೆಯಲ್ಲಿ ೧೦೬.೫೨ ಲಕ್ಷ ರೂ. ಗಳನ್ನು ವಿತರಣೆ ಮಾಡಿದೆ ?

ಇ) ಸಾಲ ಮರು ಪಾವತಿ ಮಾಡದೆ ಕೊಡಗು ಜಿಲ್ಲೆಯಲ್ಲಿ ಸುಸ್ತಿದಾರರಾಗಿರುವವರ ಸಂಖ್ಯೆ ೩೮ ,

ಈ) ಮತ್ತು ಉ) ಒಟ್ಟು ಸುಸ್ತಿ ಹಣ ೨೭.೩೩ ಲಕ್ಷ. ರೂ. ಗಳು. ಒಂದು ಲಕ್ಷ ರೂ. ಗಳಿಗೂ ಹೆಚ್ಚಿನ ಸಾಲದ ಮೊಬಲಗಿಗೆ ಸುಸ್ತಿಯಾದವರು, ಸುಸ್ತಿ ಮೊಬಲಗು ಮತ್ತು ವಸೂಲಿಗಾಗಿ ತೆಗೆದುಕೊಂಡ ಕ್ರಮವು ಈ ಕೆಳಗೆ ಕಂಡಂತಿದೆ.—

	ಕೈಗಾರಿಕೆಯ ಹೆಸರು	ಸುಸ್ತಿ ಮೊಬಲಗು	ವಸೂಲಿಗಾಗಿ ತೆಗೆದುಕೊಂಡಿರುವ ಕ್ರಮ
		ರೂ.	
೧	ಮೆಸರ್ಸ್ ಫರೂಕ್ ಫರ್ನಿಚರ್ ಮಾರ್ಟ್	೧,೯೩,೮೨೨	ಕೆ. ಪಿ. ಎಂ. ಆರ್, ಅಧಿನಿಯಮದ ಮೇಲೆ ರಾಜಸ್ವ ಬಾಕಿ ಸಾಲವೆಂದು ವಸೂಲಿ ಮಾಡಲು
೨	ಮೆಸರ್ಸ್ ಕಾವೇರಿ ಹೈಲ್ಯಾಂಡ್ ಎಕ್ಸ್‌ಪ್ರೆಸ್	೨,೦೫,೯೨೫	
೩	ಮೆಸರ್ಸ್ ಸ್ವೈಸ್ ಕೂರ್ಗ್ ಇಂಡಿಯಾ	೪,೪೮,೮೪೨	ಜಿಲ್ಲಾಧಿಕಾರಿಗೆ ಬೇಡಿಕೆ ಸಲ್ಲಿಸಿದೆ.
೪	ಮೆಸರ್ಸ್ ಎನ್. ಜೆ. ಎಂಟರ್ ಪ್ರೈಸಸ್	೧೦,೬೦,೩೯೫	ರಾಜ್ಯ ಹಣಕಾಸು ನಿಗಮಗಳ ಅಧಿನಿಯಮದ ೨೯ನೇ ಸೆಕ್ಷನ್ ಪ್ರಕಾರ ಈ ಕೈಗಾರಿಕೆಯ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ವಿಷಯ ನ್ಯಾಯಾಲಯದ ಮುಂದೆಯೂ ಇದೆ.
೫	ಮೆಸರ್ಸ್ ಸಿದ್ದೇಶ್ವರ ರೈಸ್ ಮಿಲ್	೧,೦೮,೮೦೨	ಭಾರತೀಯ ಔದ್ಯೋಗಿಕಾಭಿವೃದ್ಧಿ ಬ್ಯಾಂಕಿನ ಪುನರ್ವಸತಿ ಯೋಜನೆಯ ಅಡಿಯಲ್ಲಿ ಈ ಕೈಗಾರಿಕೆಗಳನ್ನು ಪುನರ್ವಸತಿ ಪ್ರಾಪ್ತವಾಗುವ ವಿಷಯ ಪರಿಶೀಲನೆಯಲ್ಲಿದೆ.
೬	ಮೆಸರ್ಸ್ ಕಿಪಾನ್ ಮೆಟಲ್ ಇಂಡಸ್ಟ್ರೀಸ್	೨,೧೩,೪೦೫	

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ''ಈ'' ಪ್ರಶ್ನೆಗೆ ಒಂದು ಲಕ್ಷಕ್ಕೂ ಹೆಚ್ಚು ಸುಸ್ತಿದಾರರ ೬ ಕಂಪನಿಗಳ ಹೆಸರುಗಳನ್ನು ಮಾತ್ರ ಕೊಟ್ಟಿದ್ದಾರೆ. ಬಾಕಿ ಖಾಸಗೀಯವರು ತೆಗೆದುಕೊಂಡಿರುವ ಸಾಲದ ಬಗ್ಗೆ ಅವರ ಹೆಸರುಗಳನ್ನು ಕೊಟ್ಟಿಲ್ಲ. ಇದರ ಉದ್ದೇಶ ಏನೆಂದರೆ, ಆ ನಿಗಮಗಳ ಸಿಬ್ಬಂದಿಗಳು, ಆಪ್ತರು ಮತ್ತು ಅವರ ಅಣ್ಣತಮ್ಮಂದಿರು ಸಾಲವನ್ನು ತೆಗೆದುಕೊಂಡಿದ್ದಾರೆ. ಇವರುಗಳು ೭-೮ ವರ್ಷಗಳಿಂದಲೂ ಸಾಲವನ್ನು ಕೊಟ್ಟಿಲ್ಲ ಒಂದು ಲಕ್ಷ ಅಲ್ಲ, ೪ ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲ. ಆದುದರಿಂದ ಉದ್ದೇಶಪೂರ್ವಕವಾಗಿಯೇ ಆ ಹೆಸರುಗಳನ್ನು ಬಿಟ್ಟಿದ್ದಾರೆಂದು ಹೇಳುತ್ತೇನೆ ಇದರ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಸನ್ಮಾನ್ಯ ಅಧ್ಯಕ್ಷರೇ, ಉದ್ದೇಶಪೂರ್ವಕವಾಗಿ ನಾವು ಸತ್ಯವನ್ನು ಬಚ್ಚಿಟ್ಟಿಲ್ಲ. ಇಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಸಾಲವನ್ನು ತೆಗೆದುಕೊಂಡಂಥ ಎಲ್ಲಾ ಫರ್ಮ್‌ಗಳ ಹೆಸರುಗಳನ್ನು ಕೊಟ್ಟಿದ್ದೇವೆ. ಮಾನ್ಯ ಚಿನ್ನಪ್ಪನವರಿಗೆ ಗೊತ್ತಿದ್ದರೆ, ಎಂತಹ ವ್ಯಕ್ತಿಗೆ ಸಾಲವನ್ನು ಕೊಟ್ಟಿದ್ದಾರೆ, ಅಥವಾ ಸಾಲವನ್ನು ವಸೂಲ್ಮಾಡಿಲ್ಲ ಅವರ ಮೇಲೆ ವಿಶೇಷವಾದ ಪ್ರೀತಿಯನ್ನು ತೋರಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳಿದರೆ, ನಾನು ತಕ್ಷಣ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ತಮ್ಮ ಪ್ರಶ್ನೆ ೬೫೯ (೧೯೪೨) ಮುಂದೆ ಹೋಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ಇದಕ್ಕೆ ಕಾನೂನು ಮಂತ್ರಿಗಳು ಉತ್ತರ ಕೊಡುತ್ತಾರೆ, ಅವರು ಕೌನ್ಸಿಲ್‌ಗೆ ಹೋಗಿದ್ದಾರೆ. ಇನ್ನೊಂದು ದಿವಸ ಉತ್ತರ ಕೊಡಿಸುತ್ತೇನೆ. ಇದು ಕಾನೂನು ಮಂತ್ರಿಗಳಿಗೆ ಸಂಬಂಧಪಟ್ಟದ್ದು. ಹೆಣ್ಣುಮಕ್ಕಳಿಗೆ ಸಮಪಾಲು ಕೊಡುವ ವಿಚಾರ ಕಾಯಿದೆಗೆ ಸಂಬಂಧಪಟ್ಟ ವಿಚಾರ ಇದಕ್ಕೆ ಕಾನೂನು ಮಂತ್ರಿಗಳು ಉತ್ತರ ಹೇಳಬೇಕಂ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಮುಖ್ಯಮಂತ್ರಿಗಳಿಗೇ ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು.—ಅದು ಬರುವುದಿಲ್ಲ, ಇದಕ್ಕೆ ಕಾನೂನು ಮಂತ್ರಿಗಳೇ ಉತ್ತರಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳೇ ಇಲ್ಲಿದ್ದಾರೆ ಇದಕ್ಕೆ ಅವರೇ ಉತ್ತರ ಹೇಳಬಹುದು.

ಅಧ್ಯಕ್ಷರು.—ಹಾಗಿದ್ದರೆ ಬೇರೆ ಬೇರೆ ಇಲಾಖೆಗೆ ಬೇರೆ ಬೇರೆ ಮಂತ್ರಿಗಳನ್ನು ಏತಕ್ಕೆ ಮಾಡಬೇಕು. ಮಾನ್ಯ ಯಡಿಯೂರಪ್ಪನವರೇ ನಿಮಗೆ ಉತ್ತರ ಕೊಡಿಸುತ್ತೇನೆ. ಈ ಫೈಲ್ ಕಾನೂನು ಮಂತ್ರಿಗಳಿಗೆ ಹೋಗಿದೆ, ಅವರು ಕೌನ್ಸಿಲ್‌ಗೆ ಹೋಗಿದ್ದಾರೆ, ಅವರಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಕೊಟ್ಟರೆ ಉತ್ತರ ಆಗುವುದಿಲ್ಲವೇ ? ಅವರೇ ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ತುಂಬಾ ಮಹತ್ವವಾದುದು, ಕ್ರಾಂತಿಕಾರಕ ಮಸೂದೆಯ ವಿಚಾರ ಇದು.

ಶ್ರೀ ರಾಮಕೃಷ್ಣ ಹೆಗಡೆ.—ಇದು ಕಾನೂನಿಗೆ ಸಂಬಂಧಪಟ್ಟ ವಿಚಾರವಾದುದರಿಂದ ಕಾನೂನು ಇಲಾಖೆ ಈ ವಿಚಾರವನ್ನು ಡೀಲ್ ಮಾಡುತ್ತದೆ. ಕಾನೂನಿಗೆ ತಿದ್ದುಪಡಿ ಮಾಡಬೇಕಾದರೆ ಕಾನೂನು ಇಲಾಖೆ ಮಾಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾನೂನಿಗೆ ಏನು ತಿದ್ದುಪಡಿ ಮಾಡಬೇಕೆಂದು ತಾವು ಹೇಳಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ನಾಳೆಗೆ ಬೇಧ ಏನಾಗುತ್ತದೆ, ಕಾನೂನು ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳ ಧೈರ್ಯವನ್ನು ನಾವು ನೋಡಬೇಕಲ್ಲ, ಅವರು ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬೪೦ (೨೨೪೫) ಪ್ರಶ್ನೆಗೆ ಕಾಲಾವಕಾಶ ಬೇಡಿದ್ದಾರೆ

ಶ್ರೀ ಕೆ. ಜಿ. ಶಾಣಪ್ಪ.—ಯಾವಾಗ ಕೊಡುತ್ತಾರೆ ಎಂಬುದು ಬೇಕಲ್ಲ.

ಅಧ್ಯಕ್ಷರು.—ಕಾಲಾವಕಾಶ ಕೇಳಿದ್ದಾರೆ, ಉತ್ತರ ಕೊಡಿಸುತ್ತೇನೆ.